ತಪ್ಪಿಯೂ ನನ್ನನ್ನು ಏಕವಚನದಿಂದ ಸಂಬೋಧಿಸಲಿಲ್ಲ.

'ನಿಮ್ಮ ಚಿತ್ರಗಳನ್ನೇ ನೋಡಿಕೊಂಡು ಬೆಳೆದಿದ್ದೇನೆ. ನನಗೂ ಗೌರಿ ಎಂಬ ತಂಗಿ ಇದ್ದಳು. ಎಂದೋ ಕಳೆದು ಹೋದಳು. ನೀವು ನನ್ನನ್ನು ಕುಮಾರಣ್ಣ ಎಂದು ಕರೆದಿದ್ದೀರಿ. ತಂಗಿಗೆ ಅಣ್ಣ ಸಹಾಯ ಮಾಡುವುದರಲ್ಲಿ ಹಣಕಾಸಿನ ವಿಚಾರ ಏಕೆ.'

ಕುಮಾರಣ್ಣನ ಇನ್ನೊಂದು ಮುಖದ ಪರಿಚಯ ನನಗಾಯಿತು. ಆ ಮಾತಲ್ಲಿ ವಿಷಾದದ ಛಾಯೆ ಇದ್ದಂತೆ, ಅವನ ಕಣ್ಣಂಚಿನಲ್ಲೂ ನೀರಹನಿ ಇರಬಹುದೆಂದು ನನಗೆ ಭಾಸವಾಯಿತು.

★★★

**ಉಪ ಸಂಹಾರ:**

ಅದಾದ ಮೇಲೆ ನಡೆದದ್ದೆಲ್ಲ ಪವಾಡವೇ. ಕುಮಾರಣ್ಣನನ್ನು ಭೇಟಿ ಮಾಡಿದ ಐದೇ ದಿನಗಳಲ್ಲಿ ಅದೇ ನಿರ್ಮಾಪಕ ಓಡಿ ಬಂದು ನನ್ನ ಮನೆಯ ಶ್ಯೂರಿಟಿಯ ಪತ್ರ ಹಾಗೂ ಒಂದು ಕೋಟಿ ರೂಪಾಯಿ ಹಣ ಹಿಂತಿರುಗಿಸಿದ್ದ.

ಆ ನಿರ್ಮಾಪಕನ ಮಗಳನ್ನು ಯಾರೋ ಮೂರು ದಿನ ಕಿಡ್‌ನ್ಯಾಪ್ ಮಾಡಿದ್ದರಂತೆ. ಪೊಲೀಸರು ಬಹಳ ಕಷ್ಟಪಟ್ಟು ಹುಡುಕಿ ಕೊಟ್ಟರು ಅಂತ ಪೇಪರಿನಲ್ಲಿ ಸುದ್ದಿಯಾಗಿತ್ತು. ಕನ್ನಡದ ಪ್ರಸಿದ್ಧ ಯುವನಟ ಕಾರ್ ಅಪಘಾತದಲ್ಲಿ ಬದುಕಿ ಉಳಿದದ್ದೇ ಹೆಚ್ಚು. ಪ್ಲಾಸ್ಟಿಕ್ ಸರ್ಜರಿಯಲ್ಲಿ ಮುಖದ ಮೊದಲಿನ ಸೌಂದರ್ಯವೇ ಬದಲಾಗಿ ಹೋಯಿತು.

'ಹೇಗಿದ್ದೀರಿ' ಅಂದ ಕುಮಾರಣ್ಣ ಫೋನಿನಲ್ಲಿ.

'ಚೆನ್ನಾಗಿದ್ದೇನೆ ನಿಮ್ಮ ದಯದಿಂದ' ಅಂದವಳು, 'ಆ ನಟನಿಗೆ ಆಕ್ಸಿಡೆಂಟ್ ಆಯಿತಂತೆ ಗೊತ್ತಾ' ಎಂದೆ.

'ಹೌದಾ, ಇತ್ತೀಚೆಗೆ ಪೇಪರ್ ಓದಿಲ್ಲ. ಚಿತ್ರ ಜಗತ್ತಿನ ಸುದ್ದಿಗಳ ಬಗ್ಗೆ ಆಸಕ್ತಿಯೂ ಇಲ್ಲ' ಅಂದವನು ಮಾತು ಮುಂದುವರೆಸಿದ, 'ನೀವು ಮತ್ತೆ ನಟಿಸಬೇಕು. ನಾಲ್ಕಾರು ನಿರ್ಮಾಪಕ, ನಿರ್ದೇಶಕರಿಗೆ ಹೇಳಿದೀನಿ. ದುಡ್ಡಿನ ಬಗ್ಗೆ ರಾಜಿ ಮಾಡಿಕೊಳ್ಳಬೇಡಿ.'

ಈಗ ನನ್ನ ಕೈಲ್ಲಿ ಹತ್ತಾರು ಚಿತ್ರಗಳಿವೆ. ನನ್ನ ಹೆಸರು ಚಾಲ್ತಿಯಲ್ಲಿದೆ. ಕುಮಾರಣ್ಣ ಪ್ರತಿ ಗೌರಿಹಬ್ಬಕ್ಕೆ ತಪ್ಪದೆ ಸೀರೆ, ಅರಿಸಿನ ಕುಂಕುಮ, ಬಾಗಿನ ಕಳಿಸಿ ಕೊಡುತ್ತಾನೆ.

ಈಗಲೂ ಯೋಚಿಸುತ್ತೇನೆ. 'ರಂಗಸ್ಥಳಕ್ಕಿಂತ ನೇಪಥ್ಯದ ಮಹತ್ತ್ವವೇ ದೊಡ್ಡದು.' ಕುಮಾರಣ್ಣನನ್ನು ಪ್ರತಿ ಯುಗಾದಿಗೆ ಮನೆಗೆ ಊಟಕ್ಕೆ ಕರೆಯುತ್ತೇನೆ, 'ನಾನು ನಿಮ್ಮನ್ನು ಗೌರಿ ಎಂದು ಕರೆಯಬಹುದೆ?' ಅಂತ ಮೊನ್ನೆ ಕೇಳಿದ. ಅದಕ್ಕಿಂತ ಹೆಚ್ಚಿನ ಸೌಭಾಗ್ಯ ಇನ್ನೇನಿದೆ?

**ಎನ್.ಪಿ. ಮಂಜುನಾಥ್**

ತುಮಕೂರು ಜಿಲ್ಲೆಯ ತಿಪಟೂರಿನವರು. ಕತೆ, ಕಾದಂಬರಿ, ನಾಟಕ, ಪ್ರಬಂಧ ಸೇರಿದಂತೆ ಸಾಹಿತ್ಯದ ವಿವಿಧ ಪ್ರಕಾರಗಳಲ್ಲಿ ಬರವಣಿಗೆ ಮಾಡಿದ್ದಾರೆ. ಅವರು ಬರೆದ ಅನೇಕ ನಾಟಕಗಳು ಯಶಸ್ವಿ ಪ್ರದರ್ಶನ ಕಂಡಿವೆ. ವಿವಿಧ ಪತ್ರಿಕೆಗಳಲ್ಲಿ ಹಲವಾರು ಕತೆಗಳು ಪ್ರಕಟಗೊಂಡಿವೆ. 'ಚಿಗುರೊಡೆವ ನೆಲ' ಅವರ ಕಥಾಸಂಕಲನ.